2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆಃ 51/2023

ಪಿ.ಡಬ್ಲುಃ 1    ಸಿಡಬ್ಲುಃ 1

| | | |
|---|---|---|
| ಸಾಕ್ಷಿಯ ಹೆಸರು | : | ಜರೀನಾ |
| ಗಂಡನ ಹೆಸರು | : | ಸಿದ್ದಿಸಾಬ್ |
| ವಯಸ್ಸು | : | 43 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಚಿನ್ನಾಪುರ ಗ್ರಾಮ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 11-09-2023

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಮೃತ ನನ್ನ ತಮ್ಮ , ಚಾಸಾ-2 ನನ್ನ ತಮ್ಮ ಜಾಫರ್ ಸಾಬ್ ನ ಹೆಂಡತಿ. ಚಾಸಾ-3 ನನ್ನ ಇನ್ನೊಬ್ಬ ತಮ್ಮ , ಚಾಸಾ-4 ನನ್ನ ಅಕ್ಕನ ಮಗ, ಚಾಸಾ-5 ಚಾಸಾ-3 ರವರ ಹೆಂಡತಿ, ಚಾಸಾ-6 ರವರು ಚಾಸಾ-2 ರವರ ತಾಯಿ , ಚಾಸಾ-7 ಮತ್ತು 8 ರವರು ಚಾಸಾ-6 ರವರ ಮಕ್ಕಳು . ನನಗೆ ಆರೋಪಿಯೂ ಗೊತ್ತಿಲ್ಲ ಆದರೆ ನನ್ನ ತಮ್ಮ ಜಾಫರ್ ಸಾಬ್ ಅವಳನ್ನು ಕರೆದುಕೊಂಡು ಬಂದಾಗ ನಾನು ನೋಡಿರುತ್ತೇನೆ. ಜಾಫರ್ ಸಾಬ್ ಪೊಲೀಸ್ ಕೆಲಸ ಮಾಡುತ್ತಿದ್ದನು. ಆತನು 16 ವರ್ಷಗಳವರೆಗೆ ಪೊಲೀಸ್ ಕೆಲಸ ಮಾಡಿರುತ್ತಾನೆ. ಮೃತನ ಮದುವೆಯೂ ಚಾಸಾ-2 ರವರೊಂದಿಗೆ 14 ವರ್ಷಗಳ ಹಿಂದೆ ಆಗಿರುತ್ತದೆ. ಅವರಿಗೆ ಒಂದು ಹೆಣ್ಣು ಮತ್ತು ಒಂದು ಗಂಡು ಎರಡು ಮಕ್ಕಳು ಇರುತ್ತವೆ. ಮೃತನು ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿದ್ದು ಇಲ್ಲೆ ಡಿ ಆರ್ ಪೊಲೀಸ್ ಕ್ವಾರ್ಟರ್ಸ್ ಮನೆ ನಂ.11 ರಲ್ಲಿ ವಾಸವಾಗಿದ್ದನು. ನನ್ನ ತಮ್ಮ ಆರೋಪಿಯೊಂದಿಗೆ ಆಕೆಯ ಮಗನೊಂದಿಗೆ ಸದರಿ ಮನೆಯಲ್ಲಿ ವಾಸವಾಗಿದ್ದನು. ಮೃತನ ಹೆಂಡತಿ ಚಾಸಾ-2 ರವರು ತನ್ನ ಮಕ್ಕಳೊಂದಿಗೆ ನನ್ನ ತವರು ಮನೆ ಚಿನ್ನಾಪುರ ಗ್ರಾಮದಲ್ಲಿ ವಾಸವಾಗಿದ್ದಳು. ಮೃತನಿಗೂ ಮತ್ತು ಚಾಸಾ-2

ರವರಿಗೂ ಜಗಳವಾಗಿ 8 ವರ್ಷಗಳಿಂದ ದೂರವಿದ್ದರು. ಮೃತನು ಆಗಾಗ ಊರಿಗೆ ಬಂದು ಆತನ ತಾಯಿ, ನಮ್ಮನ್ನು ಮತ್ತು ಚಾಸಾ-2 ಮತ್ತು ಅವರ ಮಕ್ಕಳನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದನು.

ಆರೋಪಿಯೂ ನನ್ನ ತಮ್ಮನ ಜೊತೆ ಯಾವ ರೀತಿ ಸಂಬಂದ ಇತ್ತು ಎಂದು ನನಗೆ ಗೊತ್ತಿಲ್ಲ ಆದರೆ ನನ್ನ ತಮ್ಮನೊಂದಿಗೆ ಒಟ್ಟಿಗೆ ವಾಸಮಾಡುತ್ತಿದ್ದಳು. ಆರೋಪಿಯೂ ಮೃತನೊಂದಿಗೆ 8 ವರ್ಷಗಳಿಂದ ವಾಸಮಾಡುತ್ತಿದ್ದಳು. ಜನವರಿ ತಿಂಗಳಿನಿಂದ ಆರೋಪಿಯೂ ಮತ್ತು ಮೃತನ ಮಧ್ಯದಲ್ಲಿ ಮೃತನು ಚಾಸಾ-2 ರವರ ಮನೆಗೆ ಹೋಗಿ ಮಾತನಾಡಿಸಿಕೊಂಡು ಬರುವ ಕಾರಣ ಜಗಳವಾಗುತ್ತಿತ್ತು. ಸದರಿ ಜಗಳದ ಬಗ್ಗೆ ಆರೋಪಿ ಮತ್ತು ಮೃತ ನನ್ನ ತಮ್ಮ ನನಗೆ ಹೇಳುತ್ತಿದ್ದರು. ನಾನು ಮತ್ತು ಆರೋಪಿಯ ಅಕ್ಕ ಹಾಗೂ ಬಾವ ಸೇರಿಕೊಂಡು ಮೃತ ಮತ್ತು ಆರೋಪಿಗೆ ಜಗಳ ಮಾಡಬೇಡಿ ಎಂದು ಬುದ್ದಿ ಹೇಳಿರುತ್ತೇವೆ. ಆದರೆ ಸದರಿ ಜಗಳ ಮುಂದುವರೆಸಿದ್ದರು.

ಕಳೆದ ಉಗಾದಿ ಹಬ್ಬದ ದಿನ ಮೃತನು ಚೆನ್ನಾಪುರ ಗ್ರಾಮಕ್ಕೆ ಬಂದು ಚಾಸಾ-2 ರವರ ಮಕ್ಕಳಿಗೆ ಸೈಕಲ್ ಮತ್ತು ಗೊಂಬೆಯನ್ನು ಕೊಟ್ಟು ಹೋಗಿರುತ್ತಾನೆ . ಸದರಿ ವಿಷಯ ಗೊತ್ತಾಗಿ ಅದೇ ದಿನ ರಾತ್ರಿ ಆರೋಪಿಯೂ ಜಾಫರ್ ಸಾಬ್ ನನ್ನು ಕ್ವಾರ್ಟರ್ಸ್ ನಲ್ಲಿ ಕೊಲೆ ಮಾಡಿರುತ್ತಾಳೆ . ರಾತ್ರಿ 9-30 ರ ಸುಮಾರಿಗೆ ಆರೋಪಿಯೂ ನನಗೆ ಫೋನ್ ಮಾಡಿ ಜಾಫರ್ ನಿಗೆ ಯಾರೋ ತಲೆಗೆ ಹೊಡೆದು ಹೋಗಿರುತ್ತಾರೆ ಎಂದು ಹೇಳಿದಳು. ಸದರಿ ವಿಷಯವನ್ನು ನಾನು ಫೋನ್ ಮಾಡಿ ಚಾಸಾ-11 ರವರಿಗೆ ಜಾಫರ್ ನನ್ನು ನೋಡಿಕೊಂಡು ಬರುವಂತೆ ತಿಳಿಸಿದೆನು. ಸದರಿ ಚಾಸಾ-11 ರವರು 10 ನಿಮಿಷ ಆದ ನಂತರ ನಾನು ತಿಳಿಸುತ್ತೇನೆ ಎಂದು ನನಗೆ ಹೇಳಿದನು. ಸದರಿ ಚಾಸಾ-11 ರವರು ಜಾಫರ್ ನು ಮರಣ ಹೊಂದಿರುತ್ತಾನೆ ಎಂದು ನನಗೆ ತಿಳಿಸಿದನು. ನಂತರ ಬೆಳಗಿನ

ಜಾವ 4-00 ಗಂಟೆಗೆ ನಾನು ದೂರನ್ನು ದಾಖಲಿಸಿರುತ್ತೇನೆ. ಸದರಿ ದೂರನ್ನು ಆರೋಪಿಯಾ ವಿರುದ್ದ ದಾಖಲಿಸಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರನ್ನು ಕೊಡುವ ಮೊದಲು ನನ್ನ ತಮ್ಮನನ್ನು ವಿಮ್ಸ್ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಆತನನ್ನು ನಾನು ನೋಡಿದಾಗ ಆತನ ತಲೆಯ ಬಲಭಾಗದ ಹಿಂಬದಿಯಲ್ಲಿ ಹೊಡೆದ ರಕ್ತಗಾಯವಾಗಿತ್ತು. ಮೊದಲು ನಾನು ದೂರನ್ನು ಹನುಮಕ್ಕ ಮಾಡಿರುತ್ತಾಳೆ ಎಂದು ಅನುಮಾನದ ಮೇಲೆ ಕೊಟ್ಟಿದ್ದು, ಮಾರನೆಯ ದಿನ ಪೊಲೀಸರಿಂದ ಹನುಮಕ್ಕ ಮಾಡಿರುತ್ತಾಳೆ ಎಂದು ಗೊತ್ತಾಯಿತು. ಮೃತ ಜಾಫರ್ ನು ಮೊದಲನೇ ಹೆಂಡತಿಯ ಬಳಿ ಹೋಗುತ್ತಾನೆ ಎಂದು ಸಿಟ್ಟಿನಿಂದ ಕೊಲೆ ಮಾಡಿರುತ್ತಾಳೆ.

ಮೃತನ ಮೈಮೇಲೆ ಒಂದು ನೀಲಿ ಬಣ್ಣದ ಲುಂಗಿ ಇದ್ದು ಹಾಗೂ ಕಟ್ ಬನಿಯನ್ ಇರುತ್ತದೆ .

( ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಹೊಲೆದು ಸೀಲ್ ಮಾಡಲಾಗಿರುವ ವಸ್ತುಗಳನ್ನು ತೆರೆಯಲು ಪ್ರಾಜ್ಞ ಸಾರ್ವಜನಿಕ ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು ).

ಸಾಕ್ಷಿಗೆ ರಕ್ತ ಅಂಟಿದ ಒಂದು ಬನಿಯನ್ ಹಾಗೂ ರಕ್ತ ಅಂಟಿದ ಒಂದು ಲುಂಗಿಯನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ-1 ಮತ್ತು 2 ಎಂದು ಕ್ರಮವಾಗಿ ಗುರುತಿಸಲಾಯಿತು.

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ  ಹೆಚ್ ಎ ಆರ್ ವಕೀಲರಿಂದಃ</u>

ನಾನು ಚಿನ್ನಾಪುರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನಗೆ ಮಕ್ಕಳು ಇರುವುದಿಲ್ಲ. ನನ್ನ ಗಂಡ ಇರುತ್ತಾರೆ. ನನ್ನ ತಮ್ಮ ಜಾಫರ್ ಸಾಬ್ ಆರುವರೆ ಅಡಿ ಉದ್ದ ಇದ್ದು ದಷ್ಟಪುಷ್ಟವಾಗಿದ್ದನು ಎಂದರೆ ಸರಿ . ಆತನು ಮೇಲೆ ಇಬ್ಬರು ವ್ಯಕ್ತಿಗಳು ಅಟ್ಯಾಕ್ ಮಾಡಿದರೂ ಸಹ ಅದನ್ನು ತಡೆಯುವ ಶಕ್ತಿ ಹೊಂದಿದ್ದನು ಎಂದರೆ ಸರಿ . ಆರೋಪಿ ಹನುಮಕ್ಕ ಮೃತ ಜಾಫರ್ ಸಾಬ್ ನೊಂದಿಗೆ ಮದುವೆಯಾಗಿ ಕ್ವಾರ್ಟರ್ಸ್ ನಲ್ಲಿ ವಾಸವಾಗಿರುವುದು ನಮ್ಮ ಮನೆಯವರಿಗೆ ಇಷ್ಟವಿರಲಿಲ್ಲ ಎಂದರೆ ಸರಿ . ಆರೋಪಿಯೂ ಹರಿಜನ ಜಾತಿಗೆ ಸೇರಿದವಳು ಎಂದರೆ ಸರಿ . ನಾವು ಮುಸ್ಲಿಮ್ ಜನಾಂಗದವರು ಆಗಿದ್ದು, ಆರೋಪಿ ಹರಿಜನ ಇರುವುದರಿಂದ ನಮಗೆ ಸರಿ ಬರುತ್ತಿರಲಿಲ್ಲ ಎಂದರೆ ಸರಿ . ಆರೋಪಿ ಮತ್ತು ಮೃತ ಜಾಫರ್ ಸಾಬ್ ಕುಟುಂಬದ ವಿಷಯವಾಗಿ ಚೆನ್ನಾಗಿ ಇದ್ದರು.

ಚಾಸಾ-2 ರವರ ತವರು ಮನೆ ಎಮ್ಮಿಗನೂರು ಎಂದರೆ ಸರಿ . ಚಾಸಾ-2 ರವರ ತಾಯಿ ಬೆಂಗಳೂರಿನ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಚಾಸಾ-2 ರವರು ಸ್ವಲ್ಪ ದಿನ ತನ್ನ ತಾಯಿಯ ಮನೆಯಲ್ಲಿ ಇದ್ದು ನಂತರ ನನ್ನ ತವರು ಮನೆಯಲ್ಲಿ ಇರುತ್ತಿದ್ದರು. ಚಾಸಾ-2 ರವರು ಬೆಂಗಳೂರಿನಲ್ಲಿ ವಾಸವಾಗಿದ್ದರಿಂದ ಹಳ್ಳಿ ಊರಿನಲ್ಲಿ ವಾಸ ಮಾಡಲು ಇಷ್ಟಪಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಚಾಸಾ-2 ರವರು ಹಳ್ಳಿಯಲ್ಲಿ ವಾಸವಾಗದೆ ಇರುವ ಕಾರಣ ನಮ್ಮ, ಚಾಸಾ-2 ಮತ್ತು ಮೃತನ ಮಧ್ಯದಲ್ಲಿ ತಿಕ್ಕಾಟವಾಗುತ್ತಿತ್ತು ಎಂದರೆ ಸರಿ . ಈ ವಿಷಯವಾಗಿ ನಾವು ಚಾಸಾ-2 ರವರಿಗೆ ಬುದ್ದಿವಾದ ಹೇಳಿದ್ದರೂ ಸಹ ತಿಕ್ಕಾಟ ಮುಂದುವರೆಯುತ್ತಿತ್ತು ಎಂದರೆ ಸರಿ. ಈ ವಿಷಯವಾಗಿ ಚಾಸಾ-2 ರವರು ಮೃತನೊಂದಿಗೆ ಚೆನ್ನಾಗಿ ಸಂಸಾರ ಮಾಡುತ್ತಿರಲಿಲ್ಲ

ಎಂದರೆ ಸರಿ. ಚಾಸಾ-2 ರವರು ನನ್ನ ಮೇಲೆ ಮೃತನ ಮೇಲೆ ಹಾಗೂ ಆರೋಪಿಯ ಮೇಲೆ ಭಾರತೀಯ ದಂಡ ಸಂಹಿತೆ ಕಲಂ 498(ಎ) ಅಡಿಯಲ್ಲಿ, ಡಿ ವಿ ಕಾಯ್ದೆ ಅಡಿಯಲ್ಲಿ

ಮತ್ತು ಜೀವನಾಂಶ ಕೇಳಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಒಟ್ಟು 5 ಜನರ ಮೇಲೆ ಪ್ರಕರಣ ದಾಖಲಿಸಿದ್ದಳು. ಈಗಲೂ ಸಹ ಸದರಿ ಪ್ರಕರಣಗಳು ವಿಚಾರಣಾ ಅಂತದಲ್ಲಿ ಇರುತ್ತವೆ ಎಂದರೆ ಸರಿ .

ಮೃತನು ಚಾಸಾ-2 ರವರಿಗೆ ತಾನು ಸಾಯುವವರೆಗೆ ಜೀವನಾಂಶವಾಗಿ 8,000 ರೂಗಳನ್ನು ಪ್ರತಿ ತಿಂಗಳು ಕೊಡುತ್ತಿದ್ದನು ಎಂದರೆ ಸರಿ . ಈ ರೀತಿ ಪ್ರಕರಣಗಳನ್ನು ನಮ್ಮ ಮೇಲೆ ದಾಖಲಿಸಿದ್ದರಿಂದ ನಾವು ರೋಷಿ ಹೋಗಿದ್ದೇವೆ ಎಂದರೆ ಸರಿ. ಈ ಎಲ್ಲಾ ಪ್ರಕರಣಗಳು ದಾಖಲಾದ ನಂತರ ಚಾಸಾ-2 ರವರು ತನ್ನ ತಾಯಿಯ ಮನೆ ಎಮ್ಮಿಗನೂರಿನಲ್ಲಿ ವಾಸವಾಗಿದ್ದಳು ಎಂದರೆ ಸರಿ.

ನನಗೆ ರಾಃ 9-30 ಕ್ಕೆ ಫೋನ್ ಕರೆ ಬಂದ ತಕ್ಷಣ ನಾನಾಗಲಿ , ನನ್ನ ತಾಯಿ ಮತ್ತು ಗಂಡ ಮತ್ತು ಇನ್ನೊಬ್ಬ ತಮ್ಮ ಬಳ್ಳಾರಿಗೆ ಬಂದಿರುವುದಿಲ್ಲ. ನಮಗೆ ಬಳ್ಳಾರಿಗೆ ಬರಲು ತೊಂದರೆ ಇರಲಿಲ್ಲ ಎಂದರೆ ರಾತ್ರಿಯಾಗಿದ್ದ ಕಾರಣ ನಾವು ಬಂದಿರುವುದಿಲ್ಲ. ಆರೋಪಿ ಮತ್ತು ಮೃತ ಜಾಫರ್ ಸಾಬ್ ಜಗಳ ಮಾಡುತ್ತಿದ್ದ ಬಗ್ಗೆ ಅವರು ನನಗೆ ತಿಳಿಸಿದ ಬಗ್ಗೆ ನಾನು ಮೊದಲ ಬಾರಿಗೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು , ಆರೋಪಿಯ ಅಕ್ಕ ಮತ್ತು ಬಾವ ಅವರಿಗೆ ಸಮಾಧಾನ ಮಾಡಿ ಬುದ್ದಿ ಹೇಳಿ ಬಂದಿರುತ್ತೇವೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾವು ಬುದ್ದಿವಾದ ಹೇಳಿದ್ದರೂ ಸಹ ಆರೋಪಿ ಮತ್ತು ಮೃತನು ಜಗಳ ಮುಂದುವರೆಸಿದ್ದರು ಎಂದು ಇದೇ ದಿನ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-**11** ರವರು ನನಗೆ ಜಾಫರ್ ಸಾಬ್ ಮರಣ ಹೊಂದಿದ ಬಗ್ಗೆ ತಿಳಿಸಿದಾಗ ನಾನು , ನಮ್ಮ ಅಕ್ಕನ ಮಗ ಹಾಗೂ ಇನ್ನೊಬ್ಬನು ಬಳ್ಳಾರಿಗೆ ಬಂದೆವು. ಮೃತನು ಈ ಎಲ್ಲಾ ಒತ್ತಡಗಳಿಗಾಗಿ ಸಾಕಷ್ಟು ಸಾಲ ಮಾಡಿಕೊಂಡಿದ್ದನು ಎಂದರೆ ಸರಿ. ಸದರಿ ಸಾಲವನ್ನು ಮರಳಿ ತೀರಿಸಲು ಸಾಧ್ಯವಾಗದೆ ಇರುವುದರಿಂದ ಒದ್ದಾಟ ಮಾಡುತ್ತಿದ್ದ ಎಂದರೆ ಸರಿ. ಸಾಲ ಕೊಟ್ಟವರು ಜಾಫರ್ ಸಾಬ್ ನಿಗೆ ಒತ್ತಡ ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ . ನಿಪಿ-**1** ನ್ನು ಯಾರು ಬರೆದರು ಮತ್ತು ಅದರಲ್ಲಿ ಏನು ಬರೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ಸದರಿ ವಿಷಯವನ್ನು ನನಗೆ ಓದಿ ಹೇಳಿರುತ್ತಾರೆ. ಆರೋಪಿಯೂ ಜಾಫರ್ ಸಾಬ್ ನನ್ನು ಕೊಲೆ ಮಾಡಿರುತ್ತಾರೆ ಎಂದು ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ . ಹನುಮಕ್ಕ ಜಾಫರ್ ಸಾಬ್ ನೊಂದಿಗೆ ಸಂಬಂದ ಇಟ್ಟುಕೊಂಡಿದ್ದು ನಮಗೆ ಸರಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ . ನಾವೆಲ್ಲರೂ ಸೇರಿ ಯಾವುದೇ ತಪ್ಪು ಮಾಡದೆ ಇದ್ದರೂ ಸಹ ಹನುಮಕ್ಕನನ್ನು ಈ ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಚಾಸಾ-**2** ರವರು ನಮ್ಮ ಮೇಲೆ ಹಾಕಿದ ಎಲ್ಲಾ ಕೇಸುಗಳನ್ನು ಹಿಂದೆ ತೆಗೆದುಕೊಳ್ಳುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸಾಕ್ಷಿ ಹೇಳಿದರೆ ಹಿಂದೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ ಮೇರೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ **03-09-2023** ಕ್ಕೆ ಎಸ್ ಪಿ ಕಚೇರಿ ಬಳ್ಳಾರಿಯವರಿಂದ ಆರೋಪಿಗೆ ಮೃತನ ಸಾವಿನ ಪರಿಹಾರ ಮತ್ತು ಅನುಕಂಪದ ನೌಕರಿ ಕೊಡುತ್ತೇನೆ ಎಂದು ಪತ್ರ ಬಂದಾಗ ನಾವೆಲ್ಲರೂ ಸೇರಿ ಅದನ್ನು ಬಿಟ್ಟುಕೊಡಬೇಕೆಂದು ಪಂಚಾಯಿತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಅನುಕಂಪದ ಪರಿಹಾರವನ್ನು ಚಾಸಾ-**2** ರವರಿಗೆ ಕೊಡಿಸಬೇಕೆಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಂದೆ ಈ ವಿಷಯವಾಗಿ ನಮ್ಮ ಜೊತೆ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ

ತಮ್ಮನ ಸಾವಿಗೂ ಆರೋಪಿಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.